**ದಿನಾಂಕಃ 16.12.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್.ಟಿ. ವಕೀಲರಿಂದಃ–**

1. ನಾನು ಹಾಜರುಪಡಿಸಿರುವ ನಿಪಿ–12 ಹರಿಯಬ್ಬೆ ಗ್ರಾಮಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಸರ್ವೆ ನಂಬರ್ಃ136 ರ ಜಮೀನು 4 ನೇ ಪ್ರತಿವಾದಿ ಶಶಿಧರ ಎಂಬುವವರಿಗೆ ಸೇರಿದ್ದಾಗಿರುತ್ತದೆ. ಸರ್ವೆ ನಂಬರ್ಃ136 ರ ಜಮೀನಿಗೆ ಹೋಗಲು ಸರ್ವೆ ನಂಬರ್ಃ218 ಮತ್ತು 215 ರ ಜಮೀನಿನ ಮೂಲಕ ದಾರಿ ಇರುತ್ತದೆ. ನಿಪಿ–12 ರಲ್ಲಿ ತೋರಿಸಿರುವ ರಸ್ತೆಯ ಪಶ್ಚಿಮಕ್ಕೆ ಸರ್ವೆ ನಂಬರ್ಃ218 ಮತ್ತು 215 ರ ಜಮೀನುಗಳು ಬರುವುದಿಲ್ಲ ಎಂದರೆ ಸರಿಯಲ್ಲ.

2. ನಾನು ನನ್ನ ವಾದಪತ್ರದ ಜೊತೆಯಲ್ಲಿ ಕಚ್ಚಾ ನಕಾಶೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ವಾದಪತ್ರದ ಜೊತೆಯಲ್ಲಿರುವ ಕಚ್ಚಾ ನಕಾಶೆಯನ್ನು ನೋಡಿ ಅದನ್ನು ನಾನು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯ ಜಮೀನು ವೇಣುಕಲ್ಲುಗುಡ್ಡ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ಸರ್ವೆ ನಂಬರ್ಃ236 ರಲ್ಲಿರುವ 4 ನೇ ಪ್ರತಿವಾದಿಯ ಜಮೀನು ಹರಿಯಬ್ಬೆ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ನನ್ನ ವಾದಪತ್ರದಲ್ಲಿ ಸಲ್ಲಿಸಿರುವ ನಕ್ಷೆಯಲ್ಲಿ ತೋರಿಸಿರುವ ರಸ್ತೆ ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ.

3. ನಾನು ನಕ್ಷೆಯಲ್ಲಿ ತೋರಿಸಿರುವ ಎ ಬಿ ಸಿ ಡಿ ರಸ್ತೆಯು ಪ್ರತಿವಾದಿಗಳ ಜಮೀನಿಗೆ ಹೋಗುವ ರಸ್ತೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸದರಿ ರಸ್ತೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.